ಕೈಬಿಟ್ಟರು. ಕನಿಷ್ಠ ಪಕ್ಷ ಡಿವಿಜನಲ್ ಕಮೀಷನರ್ ಅವರಿಂದ ನೀವು ಎನ್‌ಕ್ವೈರಿಯನ್ನು ಇನ್‌ಸ್ಟಿಟ್ಯೂಟ್ ಮಾಡಬೇಕೆಂದು ಕೇಳಿದರು. ಈಗ ಕಾಂಟ್ರಡಿಕ್ಟರಿ ವ್ಯೂಸ್ ಏನೆಂದರೆ, ಎಫ್.ಐ.ಆರ್‌ನಲ್ಲಿರುವುದು ಸರಿಯಲ್ಲವೆಂದು ಸಹಜವಾಗಿ ತಾವೇ ಒಪ್ಪಿಕೊಂಡು ಹೇಳಿದ್ದೀರಿ. ಇದನ್ನು ಏಕೆ ಮಾಡಿದರು ಎನ್ನುವುದರ ಬಗ್ಗೆ ಎನ್‌ಕ್ವೈರಿ ಆಗಬೇಕಲ್ಲ. ಮಾಡಿದ್ದು ಸರಿಯೇ? ಇಲ್ಲವೇ? ಅಥವಾ ಹೆಣ್ಣುಮಗಳು ಕೊಟ್ಟಿರುವಂಥ ಸ್ಟೇಟ್‌ಮೆಂಟ್ ಸರಿಯಿದೆಯೇ? ಇಲ್ಲವೇ? ಇದರ ಬಗ್ಗೆ ಎನ್‌ಕ್ವೈರಿ ಆಗಬೇಕು ತಾನೇ? ಎನ್‌ಕ್ವೈರಿ ಆಗಿ ಅದರ ರಿಪೋರ್ಟ್ ಬಂದನಂತರ ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ. ಇದರಲ್ಲಿ ಪ್ರತಿಷ್ಠೆ ವಿಷಯವೇನಿದೆ?

ಶ್ರೀ ಎಂ.ಪಿ. ಪ್ರಕಾಶ್ : ಒಂದು ವರದಿಯನ್ನು ತರಿಸಿಕೊಳ್ಳುತ್ತೇವೆಂದರೆ ವರದಿ ಶೂನ್ಯದಿಂದ ಬರುವುದಿಲ್ಲ. ಅದರ ಬಗ್ಗೆ ವಿಚಾರಣೆ ಮಾಡಿ ಅವರು ವರದಿ ಕಳುಹಿಸಿಕೊಡುತ್ತಾರೆ. ಆದುದರಿಂದ, ಪ್ರಶ್ನೆಯೇನೆಂದರೆ, ಇಟ್ ಈಸ್ ಎ ರಿಪೋರ್ಟ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮ ರಿಪೋರ್ಟ್ ಬೇರೆ, ಎನ್‌ಕ್ವೈರಿ ಬೇರೆ. ಎನ್‌ಕ್ವೈರಿ ಮಾಡಿಸುವುದರಲ್ಲಿ ಏನಿದೆ?

ಶ್ರೀ ಎಂ.ಪಿ. ಪ್ರಕಾಶ್ : ಆಗಬಹುದು. ಎನ್‌ಕ್ವೈರಿ ಮಾಡದೆ ಯಾರೂ ವರದಿ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಪದಗಳ ವಿಚಾರದಲ್ಲಿ ವ್ಯತ್ಯಾಸವಿರುವುದಾದರೆ ಎನ್‌ಕ್ವೈರಿ ಮಾಡಿ ಎಂದು ನಾವು ಕಳುಹಿಸಿಕೊಡುತ್ತೇವೆ, ಅವರು ಎನ್‌ಕ್ವೈರಿ ಮಾಡುತ್ತಾರೆ. ಈಗ ದಯವಿಟ್ಟು ಮಾನ್ಯ ಶಾಸಕರುಗಳು ಧರಣಿ ನಿಲ್ಲಿಸಿ ತಮ್ಮ ಸ್ಥಾನಗಳಿಗೆ ಹೋಗಬೇಕು. ಮಾನ್ಯ ಉಪಾಧ್ಯಕ್ಷರೇ, ಈ ವಿಚಾರಗಳ ಬಗ್ಗೆ ಎನ್‌ಕ್ವೈರಿ ಮಾಡದೇ ವರದಿ ಕೊಡುವುದಕ್ಕೆ ಆಗುವುದಿಲ್ಲವಾದ ಕಾರಣ ಎಲ್ಲಾ ಸದಸ್ಯರು ಎನ್‌ಕ್ವೈರಿ ಮಾಡಿಸುವುದಕ್ಕೆ ಒತ್ತಾಯ ಮಾಡುತ್ತಿರುವುದರಿಂದ ಎನ್‌ಕ್ವೈರಿ ಮಾಡಿಯಾದ ಮೇಲೆಯೇ ವರದಿಯನ್ನು ಕಳುಹಿಸುವಂತೆ ನಾವು ವಿಭಾಗಾಧಿಕಾರಿಗಳಿಗೆ ಹೇಳುತ್ತೇವೆ.

(ಧರಣಿ ಕುಳಿತಿದ್ದ ವಿರೋಧ ಪಕ್ಷದ ಎಲ್ಲಾ ಸದಸ್ಯರು ಬಾವಿಯಿಂದ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡರು)

ಉಪಾಧ್ಯಕ್ಷರು : ಈಗ ತಂದಿದ್ದಂಥ ನಿಲುವಳಿ ಸೂಚನೆಗೆ ಸರ್ಕಾರದ ಉತ್ತರದ ನಂತರ ಈಗ ಇದನ್ನು ಇಲ್ಲಿಗೇ ಕೈಬಿಡಲಾಗಿದೆ.

ಪ್ರಶ್ನೋತ್ತರ

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಅರಣ್ಯ ಪ್ರದೇಶದ ವಿಸ್ತೀರ್ಣ

191 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿರುವ ಅರಣ್ಯ ಪ್ರದೇಶದ ವಿಸ್ತೀರ್ಣ ಎಷ್ಟು?

ಅ) ಒತ್ತುವರಿ ಮಾಡಿಕೊಂಡಿರುವ ಅರಣ್ಯ ಪ್ರದೇಶ ಎಷ್ಟು?

ಇ) ಕಾಯ್ದಿರಿಸಲಾಗಿರುವ ಅರಣ್ಯ ಪ್ರದೇಶದ ವಿಸ್ತೀರ್ಣ ಎಷ್ಟು?

ಈ) ಎಷ್ಟು ಅರಣ್ಯ ಪ್ರದೇಶಗಳಲ್ಲಿ ಕಲ್ಲು ಗಣಿಗಳನ್ನು ತೆರೆದಿದ್ದಾರೆ?

ಉ) ಅರಣ್ಯ ಪ್ರದೇಶದ ಪಾವಿತ್ರತೆ ಹಾಳಾಗದಿರಲು ಹೋಟೇಲ್‌ಗಳಿಗೆ ಅನುಮತಿ ನೀಡದಿರುವಂತೆ ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :

ಅ) 38,28,128 ಹೆಕ್ಟೇರ್.

ಅ) 27,526.36 ಹೆಕ್ಟೇರುಗಳು.

ಇ) 28,68,997 ಹೆಕ್ಟೇರ್.

ಈ) ಮೆ : ಮೈಸೂರು ಮಿನರಲ್ಸ್ ಲಿಮಿಟೆಡ್‌ರವರಿಗೆ ಸಂಬಂಧಪಟ್ಟ ಎರಡು ಪ್ರಕರಣಗಳಲ್ಲಿ ಕೊಳ್ಳೇಗಾಲ ವಿಭಾಗಕ್ಕೆ ಸಂಬಂಧಿಸಿದಂತೆ 10.12 ಹೆಕ್ಟೇರ್‌ಗಳಿಗೆ ಅರಣ್ಯ ಸಂರಕ್ಷಣಾ ಅಧಿನಿಯಮ 1980 ರಂತೆ ಕೇಂದ್ರ ಸರ್ಕಾರದ ಅನುಮತಿ ದೊರೆತಿದೆ.

ಉ) ಹೌದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ನನಗೆ ಕೊಟ್ಟಿರುವ ಉತ್ತರದಲ್ಲಿ ಕರ್ನಾಟಕ ರಾಜ್ಯದಲ್ಲಿರುವ ಅರಣ್ಯ ಪ್ರದೇಶಗಳ ವಿಸ್ತೀರ್ಣ 38,28,128 ಹೆಕ್ಟೇರ್ ಎಂದು ಹೇಳಲಾಗಿದೆ. ಒತ್ತುವರಿ ಮಾಡಿಕೊಂಡಿರುವ ಅರಣ್ಯ ಪ್ರದೇಶಗಳ ವಿಸ್ತೀರ್ಣ 27,526 ಹೆಕ್ಟೇರ್ ಎಂದು ಹೇಳಲಾಗಿದೆ. ಇದನ್ನು ಒತ್ತುವರಿ ಮಾಡಿಕೊಂಡಿರುವ ಜಮೀನನ್ನು ಬಿಡಿಸುವುದಕ್ಕೆ ಸರ್ಕಾರ ಏನೇನು ಕ್ರಮವನ್ನು ತೆಗೆದುಕೊಂಡಿದ್ದೀರಿ ಮತ್ತು ಯಾವ ಯಾವ ಹಂತಗಳಲ್ಲಿ ಏನೇನು ಕಾರ್ಯಕ್ರಮವನ್ನು ಜರುಗಿಸಿದ್ದೀರಿ ಇದು ನನ್ನ ಮೊದಲನೆ ಪ್ರಶ್ನೆ. ಇನ್ನು ಎರಡನೆಯದಾಗಿ, ಕಾಯ್ದಿಟ್ಟ ಅರಣ್ಯ ಪ್ರದೇಶಗಳಲ್ಲಿ ಗಣಿಕೆಲಸ ಅಂದರೆ ಗ್ರಾನೈಟ್ ತೆಗೆಯಬಾರದು ಎಂದು ನೀತಿ ಇದೆ. ಈ ನೀತಿ ಇದ್ದರೂ ಕೂಡ ಮಹದೇಶ್ವರ ಬೆಟ್ಟ ಪ್ರದೇಶಗಳಲ್ಲಿ ಮತ್ತು ಬಿಳಿಗಿರಿ ರಂಗನ ಪ್ರದೇಶಗಳಲ್ಲಿ ಗ್ರಾನೈಟ್‌ನ್ನು ತೆಗೆಯುತ್ತಿದ್ದಾರೆ. ಇದನ್ನು ನಿಲ್ಲಿಸುವುದಕ್ಕೆ ನೀವು ಏನೇನು ಕ್ರಮವನ್ನು ತೆಗೆದುಕೊಂಡಿದ್ದೀರಿ. ಇದು ನನ್ನ ಎರಡನೆಯ ಪ್ರಶ್ನೆ. ಇನ್ನು ಮೂರನೆಯದಾಗಿ ಮಹದೇಶ್ವರ ಬೆಟ್ಟ ಪ್ರದೇಶಗಳಲ್ಲಿ ಮತ್ತು ಬಿಳಿಗಿರಿ ರಂಗನ ಬೆಟ್ಟ ಪ್ರದೇಶಗಳಲ್ಲಿ ಈ ವೀರಪ್ಪನ್ ಜಾಗ ಮಾಡಿಕೊಂಡು ಎಷ್ಟು ಅಲ್ಲಿ ಲೂಟಿಯಾಗಿದೆ ಎಂಬ ಬಗ್ಗೆ ನನಗೆ ಉತ್ತರವನ್ನು ಕೊಡಬೇಕು.

ಶ್ರೀ ಡಿ. ಮಂಜುನಾಥ್ : ಮಾನ್ಯ ಉಪಾಧ್ಯಕ್ಷರೇ, ಈಗ ಒತ್ತುವರಿ ಏನು ಮಾಡಿಕೊಂಡಿದ್ದಾರೆ ಅದನ್ನು ಬಿಡಿಸುವುದಕ್ಕೆ ಈಗಾಗಲೇ ಎವಿಕ್‌ಶನ್ ನೋಟೀಸ್ ಇಶ್ಯೂ ಮಾಡಿದ್ದೇವೆ. ಇನ್ನು

ಕೊಳ್ಳೇಗಾಲ ತಾಲ್ಲೂಕಿನಲ್ಲಿ ಕೆಲವು ಕಡೆ ಗಣಿ ಕೆಲಸ ಮಾಡುತ್ತಿದ್ದರು. ಆದರೆ ಈಗ ಅಲ್ಲೂ ಕೂಡ ಈ ಕೆಲಸ ಸ್ಥಗಿತಗೊಂಡಿದೆ. ಆದರೆ ಮೈಸೂರು ಮಿನರಲ್ಸ್‌ನವರು ಕೇಂದ್ರ ಸರ್ಕಾರದೊಡನೆ ವ್ಯವಹಾರ ನಡೆಸಿ ಪರ್ಮಿಶನ್ ತೆಗೆದುಕೊಂಡಿದ್ದರು. ಆದರೆ ಅವರೂ ಕೂಡ ಈಗ ಗಣಿ ಕೆಲಸ ಮಾಡುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ಏನು ಕೇಳುತ್ತೇನೆಂದರೆ ಈ ಬಗ್ಗೆ ಸಮಗ್ರವಾದ ವಿವರವನ್ನು ಸದನದ ಮುಂದೆ ತಾವು ಇಡಬೇಕು. ಇನ್ನು ಎರಡನೆಯದಾಗಿ ವೀರಪ್ಪನ್ ಅರಣ್ಯ ಪ್ರದೇಶಗಳಲ್ಲಿ ಇದುವರೆಗೆ ಮಾಡಿರುವ ಲೂಟಿಯ ವಿವರಗಳನ್ನು ತಾವು ಹೇಳಬೇಕು. ಏಕೆಂದರೆ ನೀವು ಅರಣ್ಯ ಸಚಿವರಾಗಿರುವುದರಿಂದ ಆ ಮಾಹಿತಿಯನ್ನು ನಮಗೆ ಕೊಡಬೇಕು. ಎಷ್ಟು ಕೋಟಿ ರೂಪಾಯಿಗಳ ದಂತ ನಷ್ಟವಾಗಿದೆ, ಆನೆಗಳ ಎಷ್ಟು ನಷ್ಟವಾಗಿದೆ, ಅರಣ್ಯ ಪ್ರದೇಶಗಳು ಎಷ್ಟು ನಷ್ಟವಾಗಿದೆ ಎಂಬ ಪ್ರಶ್ನೆ ಬಹಳ ಪ್ರಮುಖವಾಗಿರುವುದರಿಂದ ಅದಕ್ಕೆ ನನಗೆ ಉತ್ತರ ಬೇಕಾಗಿದೆ.

ಶ್ರೀ ಡಿ. ಮಂಜುನಾಥ್ : ಮಾನ್ಯ ಉಪಾಧ್ಯಕ್ಷರೇ, ವಾಟಾಳ್‌ರವರು ಮೊದಲು ಕೇಳಿರುವ ಪ್ರಶ್ನೆಗೂ ಈಗ ಕೇಳುತ್ತಿರುವ ಪ್ರಶ್ನೆಗೂ ಸಂಬಂಧವಿಲ್ಲವಾದುದರಿಂದ ಇದಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕ ಪ್ರಶ್ನೆಯನ್ನು ವಾಟಾಳ್‌ರವರು ಕೇಳಿದರೆ ಅದಕ್ಕೆ ಉತ್ತರವನ್ನು ಒದಗಿಸಿಕೊಡುತ್ತೇನೆ.

ಉಪಾಧ್ಯಕ್ಷರು : ವಾಟಾಳ್‌ರವರೇ, ಈಗ ಸದನದಲ್ಲಿ ನೀವು ಹೊಸದಾಗಿ ಕೇಳುತ್ತಿರುವ ಪ್ರಶ್ನೆಗೆ ಸದ್ಯದಲ್ಲಿ ಅವರ ಹತ್ತಿರ ಮಾಹಿತಿ ಇಲ್ಲ. ನೀವು ಪ್ರತ್ಯೇಕ ಪ್ರಶ್ನೆಯನ್ನು ಕಳುಹಿಸಿ. ಸಚಿವರು ಅನಂತರ ಉತ್ತರವನ್ನು ತರಿಸಿಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ನಾನು ಮತ್ತು ರುಕ್ಮಯ್ಯ ಪೂಜಾರಿಯವರು ಕೂಡಿಯೇ ಒಂದೇ ರೀತಿಯ ಪ್ರಶ್ನೆಗಳನ್ನು ಕೇಳಿದ್ದೇವೆ. ಆದರೆ ಸರ್ಕಾರ ನಮ್ಮಿಬ್ಬರಿಗೆ ಒದಗಿಸಿರುವ ಉತ್ತರಗಳು ಮಾತ್ರ ಬೇರೆ ಬೇರೆ ರೀತಿಯದ್ದಾಗಿವೆ.

ಶ್ರೀ ಡಿ. ಮಂಜುನಾಥ್ : ಮಾನ್ಯ ರುಕ್ಮಯ್ಯ ಪೂಜಾರಿಯವರ ಪ್ರಶ್ನೆ ಪಶ್ಚಿಮ ಘಟ್ಟ ಅರಣ್ಯ ಪ್ರದೇಶಗಳಿಗೆ ಸಂಬಂಧಪಟ್ಟದ್ದುದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ನನ್ನ ಪ್ರಶ್ನೆ ಏನೆಂದರೆ ಕಾಯ್ದಿಟ್ಟ ಅರಣ್ಯ ಪ್ರದೇಶಗಳಲ್ಲಿ ಗ್ರಾನೈಟ್ ತೆಗೆಯುವ ಸಲುವಾಗಿ ಡೈನಮೇಟ್ ಸಿಡಿಸುವುದರಿಂದ ಆ ಶಬ್ದಕ್ಕೆ ಹೆದರಿ ಅರಣ್ಯ ಪ್ರದೇಶಗಳಲ್ಲಿರುವ ವನ್ಯ ಮೃಗಗಳು ಒಂದು ಕಾಡಿನಿಂದ ಮತ್ತೊಂದು ಕಾಡಿಗೆ ಹೋಗುತ್ತಿವೆ. ಇದು ಪರಿಪಾಠವಾಗುತ್ತಿದೆ. ನಾವು ವನ್ಯ ಮೃಗಗಳ ಕಾಯಿದೆ ಪ್ರಕಾರ ಯಾವುದೇ ಕಾಯ್ದಿಟ್ಟ ಅರಣ್ಯ ಪ್ರದೇಶಗಳಲ್ಲಿ ಗ್ರಾನೈಟ್ ತೆಗೆಯುವುದಾಗಲೀ ಅಥವಾ ಯಾವುದೇ ರೀತಿಯ ಶಬ್ದವನ್ನು ಬರಿಸುವ ಡೈನಮೇಟ್‌ನ್ನು ಸಿಡಿಸುವುದಾಗಲೀ ಮಾಡಿದರೆ ಅದಕ್ಕೆ ಕಠಿಣವಾದ ಸಜೆ ವಿಧಿಸುವುದಾಗಿ ಕಾಯಿದೆಯಲ್ಲಿ ಹೇಳಲಾಗಿದೆ. ಈಗ ಬಿಳಿಗಿರಿರಂಗನ ಅರಣ್ಯ ಪ್ರದೇಶಗಳಲ್ಲಿ ನಿರಂತರವಾಗಿ ಮತ್ತು ನಿರಾತಂಕವಾಗಿ ಗ್ರಾನೈಟ್‌ನ್ನು ತೆಗೆಯುತ್ತಿದ್ದಾರೆ. ಇದನ್ನು ನಿಲ್ಲಿಸುವುದಕ್ಕೆ ಅರಣ್ಯ ಇಲಾಖೆಯವರು ಕೈಗೊಂಡಿರತಕ್ಕಂಥ ಕ್ರಮಗಳೇನು ?

ಶ್ರೀ ಡಿ. ಮಂಜುನಾಥ್ : ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ನಾನು ಇದಕ್ಕೆ ಉತ್ತರ ಕೊಟ್ಟಾಗಿದೆ ಎಲ್ಲಾ ಕಡೆ ಗಣಿ ಕೆಲಸ ನಡೆಯದೇ ಸ್ಥಗಿತಗೊಂಡಿದೆ ಎಂದು ಹೇಳಿದ್ದೇನೆ. ವಾಟಾಳ್‌ರವರು ಹೇಳಿದ ಪ್ರದೇಶದಲ್ಲೂ ಕೂಡ ಗಣಿ ಕೆಲಸ ಮಾಡುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ಬಂಡೀಪುರ ಮತ್ತು ನಾಗರಹೊಳೆಯಂಥ ಅಭಯಾರಣ್ಯಗಳಲ್ಲಿ ಕೆಲವು ಮಂದಿ ಹೋಟೆಲ್‌ಗಳನ್ನು ತೆಗೆಯುವುದಕ್ಕೆ ಮುಂದೆ ಬಂದಿದ್ದಾರೆ. ಒಂದು ವೇಳೆ ಹೋಟೆಲ್‌ಗಳನ್ನು ತೆಗೆದಿದ್ದೇ ಆದರೆ ಅಲ್ಲಿ ಜನಸಂಖ್ಯೆ ಹೆಚ್ಚಾಗಿ ಶಬ್ದ ಹೆಚ್ಚಾಗಿ ಅಲ್ಲಿರುವ ವನ್ಯಮೃಗಗಳು ಅರಣ್ಯ ಬಿಟ್ಟು ಹೋಗತಕ್ಕಂಥ ಪರಿಸ್ಥಿತಿ ಬರುತ್ತದೆ. ತಾವು ಈ ಅರಣ್ಯಗಳನ್ನು ಸಂರಕ್ಷಣೆ ಮಾಡುವ ದೃಷ್ಟಿಯಿಂದ ಅಲ್ಲಿ ಹೋಟೆಲ್‌ಗಳನ್ನು ತೆಗೆಯುವುದಕ್ಕೆ ಅನುಮತಿ ಕೊಡದೇ ಇರುವ ಹಾಗೆ ಏನೇನು ಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಡಿ. ಮಂಜುನಾಥ್ : ಈ ಪ್ರಶ್ನೆ ಚರ್ಚೆಗೆ ಈ ಮೊದಲೇ ಬಂದಿತ್ತು. ತಾಜ್ ಗ್ರೂಪ್‌ನವರಿಗೆ ಅಲ್ಲಿ ಹೋಟೆಲನ್ನು ತೆಗೆಯಲು ಅನುಮತಿ ಕೊಡಬೇಕೆಂದು ಈ ಹಿಂದೆ ಅಗ್ರಿಮೆಂಟ್ ಆಗಿತ್ತು. ಅದಕ್ಕೆ ಪಬ್ಲಿಕ್ ಇಂಟರೆಸ್ಟ್ ಪಿಟೀಶನ್ ಹಾಕಿದ್ದರಿಂದ ಅಲ್ಲಿ ಹೋಟೆಲನ್ನು ತೆರೆಯಲು ಅನುಮತಿ ಕೊಡಬಾರದು ಎಂದಾಗಿದೆ. ಅಲ್ಲಿ ಏಕೆ ಅನುಮತಿಯನ್ನು ಕೊಡುವ ಬಗ್ಗೆ ಮುಂದುವರಿಯಲಾಗಿತ್ತು ಎಂದರೆ ಅಲ್ಲಿ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಾರ್ಪೊರೇಶನ್ನಿನವರು ಕೆಲವು ಮನೆಗಳನ್ನು ಕಟ್ಟಿ ಅರ್ಧಂಬರ್ಧಕ್ಕೆ ನಿಲ್ಲಿಸಿಬಿಟ್ಟಿದ್ದರು. ಆ ಮನೆಗಳ ಮೇಲೆ ಏನಾದರೂ ಮುಚ್ಚಿ ಹೋಟೆಲನ್ನು ನಡೆಸುತ್ತೇವೆಂದು ತಾಜ್ ಗ್ರೂಪ್‌ನವರು ಮುಂದೆ ಬಂದ ಕಾರಣ ಅನುಮತಿ ಕೊಡುವ ಬಗ್ಗೆ ಅಗ್ರಿಮೆಂಟ್ ಆಗಿತ್ತು. ಆದರೆ ವನ್ಯಮೃಗಗಳಿಗೆ ಹೋಟೆಲ್‌ನವರು ಹಾಕುವ ಮೈಕ್ ಶಬ್ದದಿಂದ ತೊಂದರೆಯಾಗುತ್ತದೆ ಎನ್ನತಕ್ಕಂಥ ದೃಷ್ಟಿಯಿಂದ ಅನುಮತಿ ಕೊಡುವ ಕಾರ್ಯ ಈಗ ನಿಂತುಹೋಗಿದೆ. ಸಧ್ಯಕ್ಕೆ ಯಾವುದೂ ನಮ್ಮ ಮುಂದೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ಚಾಮರಾಜನಗರ ಮತ್ತು ಕೊಳ್ಳೇಗಾಲ ಅರಣ್ಯ ಪ್ರದೇಶಗಳಲ್ಲಿ ಪ್ರತಿ ವರ್ಷ ಕಾಡ್ಗಿಚ್ಚು ಉಂಟಾಗುತ್ತದೆ. ಆಗ ಸಾವಿರಾರು ಎಕರೆ ಅರಣ್ಯ ಪ್ರದೇಶಗಳು ಕಾಡ್ಗಿಚ್ಚಿಗೆ ಸುಟ್ಟುಹೋಗುತ್ತದೆ. ಈ ಕಾಡ್ಗಿಚ್ಚನ್ನು ನಿಲ್ಲಿಸುವುದಕ್ಕೆ ವೈಜ್ಞಾನಿಕವಾದ ಹೊಸ ವಿಧಾನವನ್ನೇನಾದರೂ ತಾವು ಅನುಸರಿಸುತ್ತೀರಾ ?

ಶ್ರೀ ಡಿ. ಮಂಜುನಾಥ್ : ಸದ್ಯದಲ್ಲಿ ಯಾವುದೇ ವೈಜ್ಞಾನಿಕವಾದ ಹೊಸ ವಿಧಾನಗಳನ್ನು ನಾವು ಅನುಸರಿಸುತ್ತಿಲ್ಲ. ಏಕೆಂದರೆ ಈ ವರ್ಷ ಎಲ್ಲೂ ಕಾಡ್ಗಿಚ್ಚು ಸಂಭವಿಸಿಲ್ಲ. ಆದರೂ ಕೂಡ ಅಲ್ಲಿ ವಾಚ್ ಅಂಡ್ ವಾರ್ಡ್‌ನವರು ಇರುತ್ತಾರೆ, ಗಾರ್ಡ್ಸ್ ಇರುತ್ತಾರೆ, ಫಾರೆಸ್ಟ್ ಆಫೀಸರ್ ಇರುತ್ತಾರೆ, ರೈತರು ಇದ್ದು ಅವರು ಸಾಧ್ಯವಾದಷ್ಟು ಆ ಕಾಡ್ಗಿಚ್ಚನ್ನು ಕಂಟ್ರೋಲ್ ಮಾಡುತ್ತಾರೆ. ವೈಜ್ಞಾನಿಕವಾಗಿ ಏನು ಕ್ರಮ ತೆಗೆದುಕೊಳ್ಳಬಹುದು ಎಂಬ ಬಗ್ಗೆ ನಾವಿನ್ನೂ ಯೋಚನೆ ಮಾಡಿಲ್ಲ. ವಾಟಾಳ್‌ರವರು ಏನಾದರೂ ಸಲಹೆಯನ್ನು ಕೊಟ್ಟರೆ ನಾವು ಯೋಚನೆ ಮಾಡುತ್ತೇವೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಮಾನ್ಯ ಉಪಾಧ್ಯಕ್ಷರೇ, ಕಾಯ್ದಿಟ್ಟ ಅರಣ್ಯ ಪ್ರದೇಶಗಳು ಕ್ರಮೇಣ ನಾಶವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದರೆ ಅದಕ್ಕೆ ಸರ್ಕಾರ ಉತ್ತರದಲ್ಲಿ 29,126 ಹೆಕ್ಟೇರ್ ಅರಣ್ಯ ಪ್ರದೇಶ ಬೇರೆ ಬೇರೆ ಅಭಿವೃದ್ಧಿ ಕೆಲಸಗಳಿಗಾಗಿ ವಿನಿಯೋಗವಾಗಿದೆಯೆಂದು ಉತ್ತರ ಕೊಟ್ಟಿದ್ದಾರೆ. ಹಾಗಾದರೆ ಇನ್ನು ಉಳಿದಿರುವ ಅರಣ್ಯ ಪ್ರದೇಶಗಳನ್ನು ರಕ್ಷಿಸಲು ಸರ್ಕಾರ ಏನೇನು ಕ್ರಮಗಳನ್ನು ತೆಗೆದುಕೊಂಡಿದೆ ಎಂದು ನನ್ನ ಎರಡನೆಯ ಪ್ರಶ್ನೆಯಲ್ಲಿ ಕೇಳಿದ್ದರೆ ಅದಕ್ಕೆ ಬೇರೆ ಬೇರೆ ಕಾರಣಗಳನ್ನು ಕೊಟ್ಟಿದ್ದಾರೆ. ಆದರೆ ನನಗೆ ಗೊತ್ತಿರುವ ಹಾಗೆ ಅರಣ್ಯ ಪ್ರದೇಶಗಳನ್ನು ನಾವು ಮುಂದಿನಿಂದ ನೋಡಿದರೆ ಮರಗಳು ಹೆಚ್ಚಾಗಿ ಇರುವಂತೆ ಕಾಣುತ್ತದೆ. ಆದರೆ ಒಳಗಡೆ ಹೋದರೆ ಮರಗಳು ನಾಶವಾಗಿರುತ್ತವೆ. ಎಲ್ಲವನ್ನೂ ಕದ್ದು ಮಾರಾಟ ಮಾಡಿ ಹಾಳುಮಾಡುತ್ತಿದ್ದಾರೆ. ಅದನ್ನು ಸಂಪೂರ್ಣವಾಗಿ ರಕ್ಷಣೆ ಮಾಡುವಂಥ ಕ್ರಮ ಸರ್ಕಾರದಲ್ಲಿದೆಯೇ? ಏಕೆಂದರೆ ಅರಣ್ಯ ಪ್ರದೇಶಗಳು ನಾಶವಾಗಿ ಪ್ರಕೃತಿ ಸಮತೋಲನ ಸಂಪೂರ್ಣವಾಗಿ ಕೆಟ್ಟುಹೋಗಿದೆ. ಪ್ರಕೃತಿಯ ಸಮತೋಲನ ಕೆಟ್ಟಮೇಲೆ ಮಳೆ ಬರುವುದು ವ್ಯತ್ಯಾಸವಾಗುತ್ತದೆ ಮತ್ತು ಸೆಖೆ ಜಾಸ್ತಿಯಾಗುತ್ತದೆ. ಆದುದರಿಂದ, ಸರ್ಕಾರ ಅರಣ್ಯ ಪ್ರದೇಶಗಳನ್ನು ರಕ್ಷಿಸುವ ಸಲುವಾಗಿ ಏನೇನು ಕ್ರಮವನ್ನು ತೆಗೆದುಕೊಂಡಿದೆ ಎಂಬ ಬಗ್ಗೆ ತಿಳಿಸಬೇಕು.

ಶ್ರೀ ಡಿ. ಮಂಜುನಾಥ್ : ಮಾನ್ಯ ಉಪಾಧ್ಯಕ್ಷರೆ, ಅಲ್ಲಿ ಕಳ್ಳತನವಾಗುತ್ತಿರುವುದರಿಂದ ಅದನ್ನು ನಿಲ್ಲಿಸುವುದಕ್ಕೆ ನಾವು ಕಟ್ಟುನಿಟ್ಟಿನ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಈ ಕುರಿತ ಕಾಯ್ದೆಗೆ ಮೊನ್ನೆ ತಾನೇ ತಿದ್ದುಪಡಿ ತಂದಿದ್ದು ತಪ್ಪಿತಸ್ಥರಿಗೆ ಐದು ಸಾವಿರ ರೂಪಾಯಿಗಳಿಂದ ಐವತ್ತು ಸಾವಿರ ರೂಪಾಯಿಗಳವರೆಗೂ ದಂಡ ವಿಧಿಸುವಂತೆ ಕಾನೂನು ಮಾಡಿದ್ದೇವೆ. ದಂಡ ವಿಧಿಸುವುದರಿಂದಲಾದರೂ ತಡೆಗಟ್ಟಬಹುದೆಂಬ ಉದ್ದೇಶದಿಂದ ತಂದಿದ್ದೇವೆ. ಆದರೂ ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಕೊಡಗು ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಮಾತ್ರ ಇದು ನಡೆಯುತ್ತಿರುವುದರಿಂದ, ಸಾಧ್ಯವಾದಷ್ಟು ನಾವೂ ಸಹ ಕಂಟ್ರೋಲ್ ಮಾಡಿದ್ದು, ಅದು ಆಗದ ರೀತಿಯಲ್ಲಿ ತಡೆಗಟ್ಟುವುದಕ್ಕೆ ಪ್ರಯತ್ನಿಸುತ್ತೇವೆ.

ದಕ್ಷಿಣ ಕನ್ನಡ ಜಿಲ್ಲೆಯ ಲೋಕೋಪಯೋಗಿ ಇಲಾಖೆಯಲ್ಲಿ ಟಾರು ಕೊರತೆ

192 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯ ಲೋಕೋಪಯೋಗಿ ಇಲಾಖೆಯಲ್ಲಿ ಟಾರು ಕೊರತೆಯಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಆ) *ಎಂ.ಆರ್.ಪಿ.ಎಲ್.ನಲ್ಲಿ ಟಾರು ಉತ್ಪಾದನೆ ಯಾಗುತ್ತಿದ್ದರೂ ಅಲ್ಲಿ ಖರೀದಿಸದಿರಲು ಕಾರಣವೇನು?*

ಇ) *ಗುತ್ತಿಗೆ ಅವಧಿ ಒಳಗೆ ಟಾರು ಒದಗಿಸದಿದ್ದಲ್ಲಿ ಗುತ್ತಿಗೆದಾರರಿಗೆ ಕ್ಲೇಮ್ ಹಾಕಲು ಅವಕಾಶ ನೀಡದಂತಾಗುವುದಿಲ್ಲವೇ?*